ಇರಾದೆಯನ್ನು ತೋಡಿಕೊಂಡಿದ್ದ. 'ಅಯ್ಯೋ ಅಪ್ಪ ಆ ಹೊಲ ಕಟ್ಕೆಂಡು ಏನ್ಮಾಡ್ತೀಯ ಈಗ, ಸಾಧ್ಯವಾದ್ರೆ ಮಾರಿಬಿಡು, ಇಲ್ಲಾ ಅಂದ್ರೆ ಹೋದ್ರೆ ಹೋಯ್ತು ತೆಪ್ಪಗೆ ಇದ್ಬಿಡು. ಅದ್ಕೇ ಅಂತ ಅಷ್ಟೊಂದು ದುಡ್ಡು ಖರ್ಚುಮಾಡ್ಕಂಡು ಅಲ್ಲಿಗೆ ಹೋಗ್ಬೇಕಾ' ದೊಡ್ಡ ಮಗ ಪೆರುಮಾಳ್ ಅಪ್ಪನ ಮಾತುಗಳನ್ನು ಕೇಳುತ್ತಲೇ ಧುಮುಗುಟ್ಟಿದ್ದ. 'ಅದ್ರೊಳ್ಗೆ ನಿಮ್ಮಮ್ಮನ ಸಮಾಧಿ ಇಲ್ದೇ ಬರೀ ಹೊಲ ಆಗಿದ್ರೆ, ಆಗ್ಲೋ ಈಗ್ಲೋ ಬಿದ್ದೋಗೋ ಈ ಘಟಕ್ಕೆ ಅದನ್ನ ಕಟ್ಕೆಂಡು ಏನಾಗ್ಬೇಕಾಗಿತ್ತು ಹೇಳು' ಅನ್ನುವಾಗ ಮನವಾಳನ್‌ನ ಗಂಟಲ ಸೆರೆ ಉಬ್ಬಿತ್ತು. 'ಈಗ ಅಮ್ಮನ ಸಮಾಧಿ ತಗಂಡು ಏನ್ಮಾಡ್ತೀಯಪ್ಪಾ, ಅಲ್ಲಾ ಇಲ್ಲಿ ಹೂಳಾಕೂ ಇಷ್ಟು ವರ್ಷ ಅಂತ ನೆಲಾನ ಬಾಡಿಗೆಗೆ ತಗೊಳ್ಳಾದು ನಿಂಗೆ ಗೊತ್ತಿಲ್ವ, ಆ ಒಪ್ಪಂದ ಮುಗುದ್ ಮೇಲೆ ಅಲ್ಲಿ ಬೇರೆ ಇನ್ಯಾರ್ನೋ ಹೂಳ್ತಾರೆ ಅಲ್ವ, ಹಂಗೇ ಅಂದ್ಕಂಡ್ರಾಯ್ತು' ಕಿರಿಯ ಮಗ ಸೆಂಥಿಲ್‌ನ ಕಡ್ಡಿ ಮುರಿದಂಥ ಮಾತುಗಳು ಮನವಾಳನ್‌ನನ್ನು ಮತ್ತಷ್ಟು ಸಂಕಟಕ್ಕೆ ದೂಡಿದ್ದವು. ಜೊತೆಗೆ 'ಮಾವ ಈ ವಯಸ್ಸಲ್ಲಿ, ಅದೂ ಆರೋಗ್ಯಾನೂ ನೆಟ್ಟಗಿಲ್ಲದಿರುವಾಗ ಒಬ್ರೇ ಹೋಗೋದು ಅಂದ್ರೆ...' ಅಂತ ಸೊಸೆಯಂದಿರಾದ ಅರಸಿ ಮತ್ತು ಕಲೈವಾಣಿಯರೂ ತಕರಾರು ತೆಗೆದಿದ್ದರು. ಮನವಾಳನ್ ಅವರ ಮಾತಿಗೂ ಸೊಪ್ಪು ಹಾಕದೆ 'ಹಂಗೊಂದು ವೇಳೆ ಈ ಘಟ ಹೋಗೋದಾದ್ರೆ ಅಲ್ಲೇ ಬಿದ್ದೋಗ್ಲಿ ಬಿಡ್ರಮ್ಮ, ಹೆಂಗೂ ಪೂಂಗೊಡೀನೂ ಇರ್ತಾಳೆ' ಅಂತ ಹೊರಟು ಬಂದಿದ್ದ.

